## ಕಲ್ಪನೆ





ಜೀವಜಲವನ್ನು ಹುಡುಕಿಕೊಂಡು ಮರದ ಬೇರುಗಳು ನೆಲದ ಆಳಕ್ಕೆ ಇಳಿಯುವುದು ಯಾವಾಗಲೂ ಒಂದು ವಿಸ್ಮಯವೇ. ಗೋಡೆಯ ಬಿರುಕಿನಲ್ಲಿ ಆಲ, ಬಸರಿ ಮರಗಳು ಬೆಳೆಯುವುದು ಹೀಗೆಯೇ. ಇಲ್ಲಿ, ಒಂದಿಷ್ಟೂ ಪಸೆಯೇ ಇಲ್ಲದ ಜಾಗದಲ್ಲಿ ಬೇರು ಬಿಟ್ಟು ಎತ್ತರಕ್ಕೆ ನಿಂತ ಮರದ ಒಂದು ಚಿತ್ರ ಇದ್ದರೆ, ಕೆಳಗೆ ಹರಿಯುವ ಜಲ ತಲುಪಲು ಬಂಡೆಯನ್ನೇ ಸೀಳಿದಂತೆ ಬೇರುಗಳು ಹರಡಿರುವುದು ಇನ್ನೊಂದು ಚಿತ್ರದಲ್ಲಿ ಕಾಣುತ್ತದೆ. ಬದುಕುವ ಛಲಕ್ಕೆ ಈ ಎರಡೂ ಚಿತ್ರಗಳು ಒಂದು ರೂಪಕದಂತೆ ಇವೆ. ಈ ಚಿತ್ರ ನೋಡಿದಾಗ ನಿಮ್ಮ ಮನದಲ್ಲಿ ಕವಿತೆಯ ಸಾಲುಗಳು ಮೂಡಿದವೇ? ಹಾಗಿದ್ದರೆ ಆ ಕಲ್ಪನೆಯ ಕವಿತೆಯನ್ನು ನಮಗೆ ಕಳುಹಿಸಿಕೊಡಿ.

ನಿಮ್ಮ ಕಲ್ಪನೆಯ ಕವಿತೆ ಏಪ್ರಿಲ್ 15ರ ಒಳಗೆ ನಮಗೆ ತಲುಪಬೇಕು.

ಚಿತ್ರಗಳು: ಪದ್ಮರಾಜ ದಂಡಾವತಿ

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in